INTERNATIONAL INDIAN SCHOOL, DAMMAM

SA - 1 SEPTEMBER - 2015 Marks: 90

CLASS VIII THIRD LANGUAGE - KANNADA Time: 3 Hrs.

GENERAL INSTRUCTIONS:

1. Read all questions carefully before answering.
2. All questions must be numbered correctly as in the question paper.

---

**I. ಅ) ಸರಿಯಾದ ಪದವನ್ನು ಆರಿಸಿ ಖಾಲಿ ಸ್ಥಳ ತುಂಬಿಸಿ: [ 1 X 10 = 10 ]**

೧. ನಿನ್ನ ಸಮಾನರುಂಟೇ ______________ ( ಹಾವ, ಭಾವ, ದೇವ )

೨. ದೀನ ನಾನು ____________ ಲೋಕಕೆ ದಾನಿ ನೀನು. ( ಸಪ್ತ, ಸಮಸ್ತ, ಸಮಾಸ್ತ )

೩. ಕಬೀರದಾಸರು ದಿನವೂ ಮಗ್గದಲ್ಲಿ ____________ ಗಳನ್ನು ನೇಯುತ್ತಿದ್ದರು. ( ಚಾಪೆ, ಚಾದರ, ಚಾಮರ )

೪. ಮುದುಕನು ರಸ್ತೆಯಲ್ಲಿ __________________ ನು. ( ಕುಳಿತಿದ್ದ, ನಿಂತಿದ್ದ, ಮಲಗಿದ್ದ )

೫. ಮಕ್ಕಳು ಕುತೂಹಲದಿಂದ __________ ಆನಂದಿಸುತ್ತಾರೆ. ( ನೋಡಿ, ನೀಡಿ, ಹಾಡಿ )

೬. ಜಿರಾಫೆಗಳು __________ ವರ್ಷಗಳ ಕಾಲ ಬದುಕುತ್ತವೆ. ( ಇಪ್ಪತ್ತು, ಮೂವತ್ತು, ನಲವತ್ತು)

೭. __________ ಭಾಗದ ಬಣ್ಣ ಸ್ವಲ್ಪ ತಿಳಿಯಾಗಿರುತ್ತದೆ. ( ಹೊಟ್ಟೆಯ, ಬಟ್ಟೆಯ, ಕಟ್ಟೆಯ )

೮. ಒಂದು ಕೃತಕ ______________ ಯನ್ನು ಮಾಡಿಸಿ ಇಡಿಸಿದ್ದರು. ( ಗಿಣಿ, ಗಣಿ, ಗುಣಿ )

೯. ಧೃತರಾಷ್ಟ್ರನಿಗೆ ನೂರು ಮಂದಿ ___________ ಮಕ್ಕಳು. ( ಗಂಡು, ಗುಂಡು, ಮೊಂಡು )

೧೦. ಸಂತೋಷ + ಆಯಿತು = ________________ ( ಸಂತೋಷಆಯಿತು, ಸಂತೋಷವಯಿತು, ಸಂತೋಷವಾಯಿತು )

ಆ) **ಈ ಪದಗಳನ್ನು ಹೊಂದಿಸಿ ಬರೆಯಿರಿ: [ ½ X 10 = 5 ]**

| | |
|---|---|
| ೧. ವಿಚಾರಿಸಲು | ಭೀಷ್ಮ |
| ೨. ರಕ್ಷಿಸು ನಮ್ಮ | ಸ್ವಭಾವ |
| ೩. ಅಬ್ರಹಾಂ ಲಿಂಕನ್ | ಕಣ್ಣು |
| ೪. ಏಕನಾಥರು | ಆಕಾರ |
| ೫. ಆಕರ್ಷಕ | ಅಮೇರಿಕ |
| ೬. ಶಾಂತ | ನಮ್ಮನನವರತ |
| ೭. ವಿಚಿತ್ರ | ಮತಿಹೀನ ನಾನು. |
| ೮. ಗಿಣಿಯ | ಕೌರವರು |
| ೯. ಪಿತಾಮಹ | ಹಿರಿಯ ಸಂತರು |
| ೧೦. ಧೃತರಾಷ್ಟ್ರನ ಮಕ್ಕಳು | ಪ್ರಾಣಿಗಳು |

ಇ) **ಈ ಪದಗಳನ್ನು ಬಿಡಿಸಿ ಬರೆಯಿರಿ: [ 1 X 3 = 3 ]**

೧. ದೇಶವನ್ನು ೨, ಪುಸ್ತಕದಲ್ಲಿ ೩. ಅಲ್ಲೇನಿದೆ

ಈ ) **ಈ ಪದಗಳನ್ನು ಜೋಡಿಸಿ ಬರೆಯಿರಿ: [ 1 X 3 = 3 ]**

೧. ನೀನು + ಎನಗೆ = ______________

೨. ನಾಮ + ಆವಳಿ = ________________

೩. ಪೊಗಳಿಕೆ + ಇತ್ತು = _________________

ಉ) **ಸ್ವಂತ ವಾಕ್ಯ ಬರೆಯಿರಿ**: ( 1 X 4 = 4 )

೧. ಮೃಗಾಲಯ ೨. ಶರೀರ ೩. ಮಾವಿನಮರ ೪. ಗುರಿಸಾಧನೆ

II. ಅ) **ಈ ಕೆಳಗಿನ ಪದಗಳ ಅರ್ಥ ಬರೆಯಿರಿ: [½ X 10 = 5]**

೧. ಪರಿಣತ ೨. ಮತಿ ೩. ನಿಪುಣ ೪. ವಿಸ್ಮಯ ೫. ಚಿಮ್ಮಿತು

೬. ವೃತ್ತಿ ೭. ಉದ್ದೇಶ ೮. ಆತಂಕ ೯. ಚಿತ್ತಾರ ೧೦. ಅಂತರಿಕ್ಷ

ಆ) **ಈ ಕೆಳಗಿನ ಐದು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ: ( 1 X 5 = 5 )**

೧. ರಸ್ತೆ ೨. ಮರ ೩. ಕಣ್ಣು ೪. ಅಂಜಿಕೆ ೫. ಪ್ರಪಂಚ ೬. ಖಂಡಿತ

ಇ) **ಈ ಕೆಳಗಿನ ಪದಗಳ ವಿರುದ್ಧ ಪದವನ್ನು ಬರೆಯಿರಿ**: ( 1 X 5 = 5 )

೧. ಶಿಷ್ಯ ೨. ಶತ್ರು ೩. ಸ್ವರ್ಗ ೪. ಪವಿತ್ರ ೫. ಹೊಗಳಿಕೆ

ಉ) **ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ: ( 1 X 2 = 2 )**

೧. ಕತ್ತಿ , ಈಟಿ, ಬಾಣ, ಗದೆ, ರಥ

೨. ಶ್ರದ್ಧೆ, ನಿಷ್ಠೆ, ಆಸ್ಥೆ, ಅಸಕ್ತಿ, ಶಕ್ತಿ

**III. ಅ) ಬಿಟ್ಟ ಸ್ಥಳ ತುಂಬಿಸಿ: ( 1 X 5 = 5 )**

೧. ಜಿರಾಫೆಗಳ ಬೆನ್ನಿನ ಹಿಂಭಾಗದಲ್ಲಿ ________________ ಉದ್ದವಾದ ಎಲುಬುಗಳಿವೆ.

೨. ಕರ್ನಾಟಕದ ಮುಖ್ಯಮಂತ್ರಿ ________________________________.

೩. ಕಬೀರದಾಸರು ಒಬ್ಬ ಉತ್ತಮ _______________ ಗಳಾಗಿದ್ದರು.

೪. ಸುಲಭ + ಅಲ್ಲ = ____________________

೫. ಮೃದು ದೇಹಕ್ಕೆ ನಾಟಿದ್ದ __________________ ಕಿತ್ತೆಸೆದನು.

ಆ) **ವಾಕ್ಯ ಸರಿಪಡಿಸಿ ಬರೆಯಿರಿ: ( 1 X 2 = 2 )**

೧. ಇರಬಲ್ಲವು ದಿನಗಳ ಕಾಲ ಇವು ಅನೇಕ ನೀರಿಲ್ಲದೆ.

೨. ಚುರುಕಾಗಿರುತ್ತವೆ ಬಹಳ ಕಿವಿಗಳು ಇವುಗಳು

ಇ) **ಈ ಪದಗಳ ಬಹುವಚನ ರೂಪ ಬರೆಯಿರಿ: ( ½ X 3 = 1 ½ )**

೧. ಮಗು ೨. ಬೇಟೆಗಾರ ೩. ಕುದುರೆ

ಈ) ಪದಗಳನ್ನು ಜೋಡಿಸಿ ಸರಿಯಾದ ಪದ ಬರೆಯಿರಿ : ( ½ X 4 = 2 )

೧. ಣ್ಣುಕಯಣಿಗಿ    ೨. ದೈವಿಲ್ಲುಬಿ    ೩. ರುಕಲಬಾ    ೪. ನೆಧಸಾರಿಗು

IV. ಅ) ಈ ವಾಕ್ಯಗಳಲ್ಲಿನ ಕರ್ತೃಪದಗಳ ವಚನ ಗುರುತಿಸಿ: ( 1 X 2 = 2 )

೧. ಬಾಲಕರು ಆಟ ಆಡುತ್ತಿದ್ದಾರೆ.

೨. ಹದ್ದುಗಳು ಬಹಳ ಎತ್ತರದಲ್ಲಿ ಹಾರುತ್ತವೆ.

ಆ) ಈ ವಾಕ್ಯಗಳ ಕರ್ತೃಪದಗಳಲ್ಲಿನ ಲಿಂಗವನ್ನು ಗುರುತಿಸಿ: ( 1 X 3 = 3 )

೧. ಎತ್ತುಗಳು ನೀರು ಕುಡಿಯುತ್ತಿವೆ.

೨. ಕಮಲ ಶಾಲೆಗೆ ಹೋಗಿ ಬಂದಳು.

೩. ರವಿಯು ಸೈಕಲ್ ಕಲಿಯುತ್ತಿದ್ದಾನೆ.

ಇ) ಈ ವಾಕ್ಯಗಳಲ್ಲಿರುವ ವಿಶೇಷಣ ಪದಗಳನ್ನು ಆರಿಸಿ ಬರೆಯಿರಿ: ( 1 X 4 = 4 )

೧. ಹದಿನೈದು ಹುಡುಗರು ನಾಟಕವಾಡಲು ಆಯ್ಕೆಯಾಗಿದ್ದರು.

೨. ಕಬ್‌ಗಳು ನೀಲಿ ಬಟ್ಟೆ ಧರಿಸಿದ್ದಾರೆ.

೩. ಅವರು ಒಳ್ಳೆಯ ಹುಡುಗರು.

೪. ಜಿರಾಫೆಗಳು ಎತ್ತರದ ಪ್ರಾಣಿಗಳು.

ಈ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: ( 1 X 4 = 4 )

1) 50    2) 63    3) 48    4) 72

V. ಅ) ಈ ಕೆಳಗಿನ ಹತ್ತು ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿರಿ: ( 1 X 10 = 10 )

೧. ರಾಜೋಚಿತ ವಿದ್ಯೆಗಳು ಎಂದರೇನು?

೨. ಜಿರಾಫೆಗಳ ಪರಮ ವೈರಿಗಳು ಯಾರು?

೩. ಸಂತ ಏಕನಾಥರು ಯಾವ ಜಲವನ್ನು ಬಡಕಲು ಕತ್ತೆಗೆ ಕುಡಿಸಿದರು?

೪. ರಕ್ಷಿಸು ನಮ್ಮನನವರತ ಪದ್ಯ ಬರೆದ ಕವಿ ಯಾರು?

೫. ಕನಕದಾಸರು ಯಾರನ್ನು ಸುಜ್ಞಾನ ಮೂರುತಿ ಎಂದಿದ್ದಾರೆ?

೬. ದೇವರು ಯಾವ ಧರ್ಮವನ್ನು ಮೆಚ್ಚುವುದಿಲ್ಲ?

೭. ಜಿರಾಫೆಗಳ ಮೈ ತೂಕ ಎಷ್ಟು ಕೆ.ಜಿ.ಯಷ್ಟಿರುತ್ತದೆ?

೮. ಭೀಮಸೇನನು ಗಿಳಿಯ ಕಣ್ಣಿಗೆ ಗುರಿ ಇಟ್ಟಾಗ ಕಾಣಿಸಿದುದೇನು?

೯. ಪಾಂಡುರಾಜನ ಮಕ್ಕಳನ್ನು ಏನೆಂದು ಕರೆಯುತ್ತಾರೆ?

೧೦. ಜಿರಾಫೆಗಳು ಯಾವ ದೇಶದ ಕಾಡುಗಳಲ್ಲಿ ಇರುತ್ತವೆ?

೧೧. ದಯಾಗುಣ ಎಂದರೇನು?

ಆ) **ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: ( 2 X 4 = 8 )**

೧. ಅಬ್ರಹಾಂ ಲಿಂಕನ್ ಯಾರು? ಆತ ಎಲ್ಲಿಗೆ ಹೊರಟಿದ್ದನು?

೨. ಸಂತ ಏಕನಾಥರು ರಾಮೇಶ್ವರಕ್ಕೆ ಏಕೆ ಹೊರಟಿದ್ದರು?

೩. ಮೃಗಾಲಯಗಳಲ್ಲಿ ಜಿರಾಫೆಗಳಿಗೆ ಯಾವ - ಯಾವ ಆಹಾರ ಪದಾರ್ಥಗಳನ್ನು ಕೊಡುತ್ತಾರೆ.

೪. ಪಾಂಡವರು ಎಷ್ಟು ಮಂದಿ? ಅವರ ಹೆಸರುಗಳೇನು?

೫. ಪಿತಾಮಹನಾದ ಭೀಷ್ಮನು ದ್ರೋಣಾಚಾರ್ಯರಲ್ಲಿ ಏನೆಂದು ಕೇಳಿಕೊಂಡನು?

೬. ಜಿರಾಫೆಗಳು ಆಕ್ರಮಣ ಮಾಡಲು ಬರುವ ಶತ್ರು ಪ್ರಾಣಿಗಳನ್ನು ಹೇಗೆ ಎದುರಿಸುತ್ತವೆ?

**VI. 1) ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿರಿ: [ 6 ½ marks ]**

ಬೇಂದ್ರೆ ೧೮೯೬ನೆಯ ಇಸವಿ ಜನವರಿ ೩೧ ರಂದು ಜನಿಸಿದರು. ತಂದೆ ರಾಮಚಂದ್ರ ಭಟ್ಟ, ತಾಯಿ ಅಂಬಿಕೆ (ಅಂಬವ್ವ). ಬೇಂದ್ರೆಯವರ ಕಾವ್ಯನಾಮ ಅಂಬಿಕಾತನಯದತ್ತ. ಬೇಂದ್ರೆ ಮನೆತನದ ಮೂಲ ಹೆಸರು ಠೋಸರ. ವೈದಿಕ ವೃತ್ತಿಯ ಕುಟುಂಬ. ಒಂದು ಕಾಲಕ್ಕೆ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ಗದಗ ಪಟ್ಟಣದ ಸಮೀಪದ ಶಿರಹಟ್ಟಿಯಲ್ಲಿ ಬಂದು ನೆಲೆಸಿದರು. ದ.ರಾ.ಬೇಂದ್ರೆ ಹನ್ನೊಂದು ವರ್ಷದವರಿದ್ದಾಗ ಅವರ ತಂದೆ ತೀರಿಕೊಂಡರು. ೧೯೧೩ರಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದ ಬಳಿಕ ಬೇಂದ್ರೆ ಪುಣೆಯ ಕಾಲೇಜಿನಲ್ಲಿ ಓದಿ ೧೯೧೮ರಲ್ಲಿ ಬಿ.ಎ. ಮಾಡಿಕೊಂಡರು. ಹಿಡಿದದ್ದು ಅಧ್ಯಾಪಕ ವೃತ್ತಿ. ೧೯೩೫ರಲ್ಲಿ ಎಂ.ಎ. ಮಾಡಿಕೊಂಡು ಕೆಲಕಾಲ (೧೯೪೪ - ೧೯೫೬ ) ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ಪ್ರಥಮ ಕಾವ್ಯ ಸಂಕಲನ "ಕೃಷ್ಣ ಕುಮಾರಿ"-ಯು ಆಗಲೇ ಪ್ರಕಟಿಸಲ್ಪಟ್ಟಿತ್ತು.

ನಾಡಿನ ತುಂಬೆಲ್ಲಾ ನಡೆದಾಡಿದ ಅವರಲ್ಲಿರುವಂತ ಪ್ರತಿಯೊಂದು ಸಾಹಿತ್ಯದ ನುಡಿಗಳು ಮಾನವನ ನಾಡಿ ಮಿಡಿತದಂತೆ ಹರಿದಾಡಿ ಇಡೀ ಕನ್ನಡ ಸಾಹಿತ್ಯ ರಂಗವನ್ನೆ ಶ್ರೀಮಂತಗೊಳಿಸಿವೆ ಎಂದರೆ ತಪ್ಪಲಾಗಲಾರದು. ಇಡೀ ಜೀವನದ ತುಂಬಾ ನಿಸ್ವಾರ್ಥ ಸೇವೆಯನ್ನು ಗೈದ "ಧಾರವಾಡ ದ ಅಜ್ಜ" ಅವರ ಕೆಲವೊಂದು ಮಕ್ಕಳ ಕವಿತೆ, ಕತೆಗಳು ಮಕ್ಕಳ ಮನಸ್ಸನ್ನು ಪರಿವರ್ತಿಸುತ್ತವೆ.

ಸಾಹಿತ್ಯ ರಚನೆ ಅವರ ಮೊದಲ ಒಲವು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕವಿತೆಗಳನ್ನು ಕಟ್ಟಿದರು. ೧೯೧೮ರಲ್ಲಿ ಅವರ ಮೊದಲ ಕವನ "ಪ್ರಭಾತ" ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿಂದಾಚೆಗೆ ಅವರು ಕಾವ್ಯ ರಚನೆ ಮಾಡುತ್ತಲೇ ಬಂದರು. "ಗರಿ", "ಕಾಮಕಸ್ತೂರಿ ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಇವರ ನಾಕುತಂತಿ ಕೃತಿಗೆ ೧೯೭೪ ಇಸವಿಯ ಕೇಂದ್ರ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಕವಿತೆಗಳನ್ನಲ್ಲದೆ ನಾಟಕಗಳು, ಸಂಶೋಧನಾತ್ಮಕ ಲೇಖನಗಳು, ವಿಮರ್ಶೆಗಳನ್ನು ಬೇಂದ್ರೆ ಬರೆದಿದ್ದಾರೆ. ೧೯೨೧ರಲ್ಲಿ ಧಾರವಾಡದಲ್ಲಿ ಅವರು ಗೆಳೆಯರೊಡನೆ ಕಟ್ಟಿದ "ಗೆಳೆಯರ ಗುಂಪು" ಸಂಸ್ಥೆ ಅವರ ಸಾಹಿತ್ಯ ಚಟುವಟಿಕೆಗಳಿಗೆ ಇಂಬು ನೀಡಿತು.

**ii . ಪ್ರಶ್ನೆಗಳು:**

೧. ದ.ರಾ. ಬೇಂದ್ರೆಯವರು ಯಾವಾಗ ಜನಿಸಿದರು?

೨. ಬೇಂದ್ರೆಯವರ ಕಾವ್ಯನಾಮವೇನು?

೩. ೧೯೨೧ರಲ್ಲಿ ಧಾರವಾಡದಲ್ಲಿ ಅವರು ಗೆಳೆಯರೊಡನೆ ಕಟ್ಟಿದ ____________ ಸಂಸ್ಥೆ ಅವರ ಸಾಹಿತ್ಯ ಚಟುವಟಿಕೆಗಳಿಗೆ ಇಂಬು ನೀಡಿತು. [ ½ marks ]

೪. ಅವರ ಪ್ರಥಮ ಕಾವ್ಯ ಸಂಕಲನ ಯಾವುದು?

೫. ಬೇಂದ್ರೆಯವರ ಇತರ ನಾಲ್ಕು ಕವನಸಂಕಲನಗಳನ್ನು ಬರೆಯಿರಿ.

೬. ಬೇಂದ್ರೆಯವರ ಯಾವ ಕೃತಿಗೆ ಜ್ಞಾನ ಪೀಠ ಪ್ರಶಸ್ತಿ ದೊರಕಿದೆ?

೭. ೧೯೧೮ರಲ್ಲಿ ಅವರ ಮೊದಲ ಕವನ ಯಾವ ಪತ್ರಿಕೆಯಲ್ಲಿ ಪ್ರಕಟವಾಯಿತು?

— x —